## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**:- ರಾಜ್ಯದ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಟೆಲಿ-ಐಸಿಯು ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಐಟಿ ಹಾರ್ಡ್‌ವೇರ್ ಮೂಲಸೌಕರ್ಯದ ಖರೀದಿ, ಸರಬರಾಜು, ಹಾಗೂ ನಿರ್ವಹಣೆಗಾಗಿ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ**:- ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರ ಏಕಕಡತ ಸಂಖ್ಯೆ: HFWS-e-H0FILE/18/2026- E HFWS- (e-2223798)

**ಪ್ರಸ್ತಾವನೆ:**

ಮೇಲೆ ಓದಲಾದ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರ ಏಕಕಡತದಲ್ಲಿ, ಟೆಲಿ-ಐಸಿಯು (Tele-ICU) ಯೋಜನೆಯನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಆರೋಗ್ಯ ಸೇವೆಗಳ ಲಭ್ಯತೆ, ಗುಣಮಟ್ಟ, ದಕ್ಷತೆ ಮತ್ತು ನಿರಂತರತೆಯನ್ನು ಸುಧಾರಿಸುವ ಉದ್ದೇಶದಿಂದ ವಿವಿಧ ಡಿಜಿಟಲ್ ಆರೋಗ್ಯ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ ಸಂಬಂಧ ತೀವ್ರ ನಿಗಾ ಘಟಕಗಳಲ್ಲಿ ರೋಗಿಗಳ ನಿರಂತರ ಮೇಲ್ವಿಚಾರಣೆ ಮತ್ತು ಸಮಯೋಚಿತ ವೈದ್ಯಕೀಯ ಹಸ್ತಕ್ಷೇಪದ (Intervension) ಅಗತ್ಯವಿದ್ದು, ವಿಶೇಷವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಲಭ್ಯತೆ ಸೀಮಿತವಾಗಿದ್ದು, ಈ ಕೊರತೆಯನ್ನು ನೀಗಿಸುವ ಉದ್ದೇಶದಿಂದ, ತೃತೀಯ ಹಂತದ ವೈದ್ಯಕೀಯ ಸಂಸ್ಥೆಗಳನ್ನು/ ಹಬ್‌ಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ICU ಸೌಲಭ್ಯಗಳಿರುವ ಸ್ಪೋಕ್ ಆಸ್ಪತ್ರೆಗಳೊಂದಿಗೆ ಸಂಪರ್ಕಿಸುವ ಹಬ್ ಮತ್ತು ಸ್ಪೋಕ್ ಮಾದರಿಯ ರಾಜ್ಯ ವ್ಯಾಪಿ ಟೆಲಿ-ಐಸಿಯು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಟೆಲಿ-ಐಸಿಯು ಕಾರ್ಯಕ್ರಮವು Adult ICU, PICU, NICU ಮತ್ತು SNCU ಸೇವೆಗಳನ್ನು ಒಳಗೊಂಡಿರುತ್ತದೆ.

ರಾಜ್ಯದಲ್ಲಿ ಈಗಾಗಲೇ 43 ಸ್ಥಳಗಳಲ್ಲಿ ಟೆಲಿ-ಐಸಿಯು ಪೈಲಟ್ ಯೋಜನೆ ಅನುಷ್ಠಾನಗೊಂಡಿದ್ದು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಹೊಂದಿರುವ ರೋಗಿಗಳಿಗೆ ರಿಮೋಟ್ ತಜ್ಞ ಮೇಲ್ವಿಚಾರಣೆ ಮತ್ತು ಸಲಹೆಯ ಅತ್ಯಂತ ಅಗತ್ಯವಿರುವುದು ಕಂಡುಬಂದಿದ್ದು, ಈ ಹಿನ್ನೆಲೆಯಲ್ಲಿ ಟೆಲಿ-ಐಸಿಯು ವ್ಯವಸ್ಥೆಯನ್ನು ರಾಜ್ಯದ ಇನ್ನಷ್ಟು ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ವಿಸ್ತರಿಸುವ ಮೂಲಕ ತೀವ್ರ ನಿಗಾ ತಜ್ಞರಿಲ್ಲದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತಜ್ಞರ ಸೇವೆಯನ್ನು ವಿಸ್ತರಿಸಲು ಪ್ರಸ್ತಾಪಿಸಿದೆ.

ಈ ವ್ಯವಸ್ಥೆಯಲ್ಲಿ ನಿಗದಿತ ಹಬ್ ಆಸ್ಪತ್ರೆಗಳು ಮತ್ತು ರಿಮೋಟ್ ICU/ಸ್ಪೋಕ್ ಆಸ್ಪತ್ರೆಗಳು ಇರಲಿವೆ. ಟೆಲಿ-ಐಸಿಯು ಅಪ್ಲಿಕೇಶನ್‌ಅನ್ನು ರಾಜ್ಯ ದತ್ತಾಂಶ ಕೇಂದ್ರದಲ್ಲಿ (SDC) ಹೋಸ್ಟ್ ಮಾಡಲು ಉದ್ದೇಶಿಸಲಾಗಿದ್ದು (ಪ್ರಸ್ತುತ Google Cloud platform ನಲ್ಲಿ ಹೋಸ್ಟ್ ಮಾಡಲಾಗಿದೆ), ಹಬ್ ಮತ್ತು ಸ್ಪೋಕ್ ಆಸ್ಪತ್ರೆಗಳ ನಡುವಿನ ಸಂಪರ್ಕಕ್ಕಾಗಿ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಈಗಾಗಲೇ ಲಭ್ಯವಿರುವ ಕರ್ನಾಟಕ ರಾಜ್ಯ ವೈಡ್ ಏರಿಯಾ ನೆಟ್‌ವರ್ಕ್ (KSWAN) ಸಂಪರ್ಕವನ್ನು ಬಳಸಿಕೊಳ್ಳಲಾಗುತ್ತದೆ. ರಿಮೋಟ್ ICU ಕೇಂದ್ರಗಳಲ್ಲಿ PTZ ಕ್ಯಾಮೆರಾಗಳ ಮೂಲಕ ICU ಹಾಸಿಗೆಗಳ ನೈಜ-ಸಮಯದ ದೃಶ್ಯ ಮೇಲ್ವಿಚಾರಣೆ ಹಾಗೂ ನೆಟ್‌ವರ್ಕ್ ಚಾರ್ಜ್ ಗಳ ಮೂಲಕ ಮಲ್ಟಿ-ಪ್ಯಾರಾ ಮೀಟರ್ ಮಾನಿಟರ್‌ಗಳಂತಹ ಬಯೋಮೆಡಿಕಲ್ ಉಪಕರಣಗಳಿಂದ ರೋಗಿಗಳ ಜೀವ ಚಿಹ್ನೆಗಳ ಮಾಹಿತಿಯನ್ನು ಟೆಲಿ-ಐಸಿಯು ಅಪ್ಲಿಕೇಶನ್‌ಗೆ ರವಾನಿಸಲು ವ್ಯವಸ್ಥೆ ಮಾಡಲಾಗುತ್ತದೆ. ಈ ಪ್ರಸ್ತಾವನೆಯು ರಾಜ್ಯದ ಈಗಿರುವ SDC ಮತ್ತು KSWAN ಮೂಲ ಸೌಕರ್ಯ ಹಾಗೂ 43 ಪೈಲಟ್ ಕೇಂದ್ರಗಳ ಕಾರ್ಯಾಚರಣಾ ಅನುಭವದ ಆಧಾರದ ಮೇಲೆ ರೂಪುಗೊಂಡಿದ್ದು, ಪ್ರತ್ಯೇಕ ಮೂಲಸೌಕರ್ಯದ ಅಗತ್ಯವಿರುವುದಿಲ್ಲ.

....2

ಈ ಯೋಜನೆಯನ್ನು ಕೆಳಕಂಡ ಆರೋಗ್ಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿರುತ್ತದೆ:-

| ವರ್ಗ | ಸಂಸ್ಥೆಗಳ ಸಂಖ್ಯೆ |
|---|---|
| SNCU ಹಬ್ಸ್ ಲೊಕೇಷನ್ ಗಳು | 5 |
| Adult Tele-ICU ಹಬ್ಸ್ ಲೊಕೇಷನ್ ಗಳು | 6 |
| **ಒಟ್ಟು ಹಬ್ಸ್ ಲೊಕೇಷನ್ ಗಳು** | **11** |
| Adult Tele-ICU ಸ್ಪೋಕ್ಸ್ ಲೊಕೇಷನ್ ಗಳು | 94 |
| SNCU/NICU ಸ್ಪೋಕ್ಸ್ ಲೊಕೇಷನ್ ಗಳು | 23 |
| PICUಸ್ಪೋಕ್ಸ್ ಲೊಕೇಷನ್ ಗಳು | 14 |
| **ಒಟ್ಟು ಸ್ಪೋಕ್ಸ್ ಲೊಕೇಷನ್ ಗಳು (ಹೊಸ)** | **131** |
| ಈಗಿರುವ ಪೈಲಟ್ ಲೊಕೇಷನ್ ಗಳು | 43 |

ಪೈಲಟ್ ಅಧ್ಯಯನ ನಡೆಸಿರುವ 43 ಆರೋಗ್ಯ ಸಂಸ್ಥೆಗಳ ಜೊತೆಗೆ 11 ಹಬ್‌ಗಳು ಹಾಗೂ 131 ಸ್ಪೋಕ್‌ಗಳನ್ನು ಒಳಗೊಂಡಂತೆ ಒಟ್ಟು 185 ಆರೋಗ್ಯ ಸಂಸ್ಥೆಗಳಲ್ಲಿ ಐಟಿ ಹಾರ್ಡ್‌ವೇರ್ (IT Hardware) ಉಪಕರಣಗಳಾದ PTZ IP ಕ್ಯಾಮೆರಾಗಳು; Layer-2 PoE Managed Switches; ಬಯೋಮೆಡಿಕಲ್ ಉಪಕರಣಗಳ ಸಂಪರ್ಕಕ್ಕಾಗಿ Non-PoE Gigabit Switches; Desktop/All-in-One ಕಂಪ್ಯೂಟರ್‌ಗಳು; UPS ಮತ್ತು ವಿದ್ಯುತ್ ಮಾಪಕ ವ್ಯವಸ್ಥೆಗಳು; ನೆಟ್‌ವರ್ಕ್‌ಗಳು ಮತ್ತು ಸಂಬಂಧಿತ ಪರಿಕರಗಳು; ಸ್ಕ್ಯಾನ್ ಸಹಿತ ಪ್ರಿಂಟರ್‌ಗಳು, ಮೈಕ್ರೋಫೋನ್ಸ್ ಸಹಿತ ಹೆಡ್ ಫೋನ್‌ಗಳು, ಅಗತ್ಯವಿರುವ Structured LAN ಮತ್ತು Passive Components; ಹಾಗೂ ಟೆಲಿ-ಐಸಿಯು ಕಾರ್ಯಾಚರಣೆಗೆ ಅಗತ್ಯವಿರುವ ಇತರೆ ಸಂಬಂಧಿತ ಹಾರ್ಡ್‌ವೇರ್‌ಗಳ ಖರೀದಿಯನ್ನು ಒಳಗೊಂಡಿದ್ದು, ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಟೆಲಿ ಐಸಿಯು ಯೋಜನೆಯನ್ನು ಅನುಷ್ಠಾನಗೊಳಿಸಲು KTTP ಕಾಯ್ದೆ 1999 ಮತ್ತು ನಿಯಮಗಳನ್ವಯ ECRP-II ರಡಿ ಲಭ್ಯವಿರುವ ರೂ. 10.78 ಕೋಟಿ ಅನುದಾನದಲ್ಲಿ ಅಗತ್ಯ IT ಹಾರ್ಡ್‌ವೇರ್ ಮೂಲಸೌಕರ್ಯದ ಖರೀದಿ, ಸರಬರಾಜು ಹಾಗೂ ನಿರ್ವಹಣೆಯನ್ನು 5 ವರ್ಷಗಳ ಅವಧಿಗೆ ಪಡೆಯಲು ಅನುಮೋದನೆ ಕೋರಲಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 108 ಎಫ್.ಪಿ.ಇ 2026**
**ಬೆಂಗಳೂರು, ದಿನಾಂಕ: 10.09.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ 43 ಪೈಲಟ್ ಅಧ್ಯಯನದ ಆರೋಗ್ಯ ಸಂಸ್ಥೆಗಳ ಜೊತೆಗೆ, 11 ಹಬ್‌ಗಳು ಹಾಗೂ 131 ಸ್ಪೋಕ್‌ಗಳನ್ನು ಒಳಗೊಂಡಂತೆ, ಒಟ್ಟು 185 ಆರೋಗ್ಯ ಸಂಸ್ಥೆಗಳಲ್ಲಿ ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಟೆಲಿ ಐಸಿಯು ಯೋಜನೆಯನ್ನು ಅನುಷ್ಠಾನಗೊಳಿಸಲು KTTP ಕಾಯ್ದೆ,1999 ಮತ್ತು ನಿಯಮಗಳನ್ವಯ ECRP-II ರಡಿ ಲಭ್ಯವಿರುವ ರೂ. 10.78 ಕೋಟಿ ಅನುದಾನದಲ್ಲಿ ಅಗತ್ಯ IT ಹಾರ್ಡ್‌ವೇರ್ ಮೂಲ ಸೌಕರ್ಯದ ಖರೀದಿ, ಸರಬರಾಜು ಹಾಗೂ ನಿರ್ವಹಣೆಯನ್ನು 5 ವರ್ಷಗಳ ಅವಧಿಗೆ ಪಡೆಯಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

**ಷರತ್ತುಗಳು:**

1. ಪ್ರಸ್ತಾಪಿತ ಯೋಜನೆಯ ವೆಚ್ಚವನ್ನು ECRP-II ಅನುದಾನ/ನಿಧಿಯಿಂದ ಭರಿಸುವುದು ಈ ಕುರಿತು ರಾಜ್ಯ ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನವನ್ನು ಕೋರುವಂತಿಲ್ಲ.

2. ಈಗಾಗಲೇ Tele PICU ಕಾರ್ಯಕ್ರಮವನ್ನು ರೂ. 998.92 ಲಕ್ಷಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಸಹಮತಿ ನೀಡಿರುವುದರಿಂದ ಯೋಜನೆಯ ಪುನರಾವರ್ತನೆಯಾಗದೇ ಇರುವುದನ್ನು ಪರಿಶೀಲಿಸಿ ಖಾತರಿ ಪಡಿಸಿಕೊಳ್ಳತಕ್ಕದ್ದು.
3. ಪ್ರಸ್ತಾಪಿತ ಉಪಕರಣಗಳ ಗುಣಮಟ್ಟ ಮತ್ತು ಉದ್ದೇಶಿತ ತಾಂತ್ರಿಕ ಅವಶ್ಯಕತೆ ಪೂರೈಕೆಯಾಗುವ ಕುರಿತು ಹಾಗೂ ಸಮಂಜಸ ದರದಲ್ಲಿ ಉತ್ತಮ ಗುಣಮಟ್ಟದ ಸಂಗ್ರಹಿಸುವುದನ್ನು ಪರಿಶೀಲಿಸಿ ಖಾತರಿ ಪಡಿಸಿಕೊಳ್ಳತಕ್ಕದ್ದು.
4. ಮುಂದೆ ಯೋಜನೆಯ ಅನುಷ್ಠಾನಕ್ಕೆ ಯಾವುದೇ ಹೆಚ್ಚುವರಿ ಮಾನವ ಸಂಪನ್ಮೂಲ ಕೋರದಂತೆ ಲಭ್ಯವಿರುವ ಮಾನವ ಸಂಪನ್ಮೂಲವನ್ನು ಬಳಕೆ ಮಾಡಿಕೊಂಡು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 687 ವೆಚ್ಚ-5/2025, ದಿನಾಂಕ: 02.09.2026 ರಲ್ಲಿ ನೀಡಿರುವ ಸಹಮತಿ ಹಾಗೂ ಸಚಿವ ಸಂಪುಟವು ಪ್ರಕರಣ ಸಂಖ್ಯೆ: C.507/2026, ದಿನಾಂಕ:09.09.2026 ರಂದು ನೀಡಿರುವ ಅನುಮೋದನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಪುಷ್ಪ) 10/9/26
ಸರ್ಕಾರದ ಜಂಟಿ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ :

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಲೆಕ್ಕ ಮತ್ತು ತನಿಖೆ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂ:5398, ಬೆಂಗಳೂರು
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ ಮಾಗಡಿ ರಸ್ತೆ, ಬೆಂಗಳೂರು.
3. ಅಭಿಯಾನ ನಿರ್ದೇಶಕರು,ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯಸೌಧ, ಮಾಗಡಿ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಖಜಾನೆ ಇಲಾಖೆ, ಕೆ.ಪಿ.ಟಿ.ಸಿ.ಎಲ್.ಕಟ್ಟಡ, ಅರಮನೆ ರಸ್ತೆ, ಬೆಂಗಳೂರು. ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
6. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ.
7. ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-5, ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ ಬಿಡಿ ಪ್ರತಿಗಳು.

ಪ್ರತಿ:

1. ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.